

ನಯವಾದ ತ್ವಚೆ, ಸುಕ್ಕು, ಕಲೆಗಳಿಲ್ಲದ ಚರ್ಮ, ಆಕರ್ಷಕ ಬಣ್ಣ ಹೊಂದುವುದು ಎಲ್ಲರ ಮನದಾಳದ ಬಯಕೆ. ಆದರೆ ಆನುವಂಶಿಕವಾಗಿಯೋ, ಜೀವನಶೈಲಿ ಮತ್ತು ಇತರ ದೈಹಿಕ, ಮಾನಸಿಕ ಕಾಯಿಲೆಗಳಿಂದಲೋ, ವಯಸ್ಸಿನ ಕಾರಣಗಳಿಂದಲೋ ಕಣ್ಣ ಸುತ್ತ ಮತ್ತು ಮುಖದ ಚರ್ಮದ ಮೇಲೆ ಕಪ್ಪು ವೃತ್ತ ಮತ್ತು ಕಲೆಗಳು ಮೂಡುವುದು ಸಹಜ.

ಈ ಸಮಸ್ಯೆಗಳು ಉದ್ಭವವಾದರೆ ಈಗ ಚಿಂತಿಸುವ ಅಗತ್ಯವಿಲ್ಲ. ಈ ಎಲ್ಲ ಸಮಸ್ಯೆಗಳಿಗೆ ಅತ್ಯಾಧುನಿಕ ಸೌಂದರ್ಯವರ್ಧಕ ಚಿಕಿತ್ಸೆ ಬಂದಿದೆ. ಕಪ್ಪು ವೃತ್ತ ನಿವಾರಣೆಗೆ ಕೊಬ್ಬಿನ ಕಸಿ ಚಿಕಿತ್ಸೆ (ಫ್ಯಾಟ್ ಟ್ರಾನ್ಸ್‌ಪ್ಲಾಂಟೇಷನ್ ಥೆರಪಿ) ಹಾಗೂ ಕಪ್ಪು ವೃತ್ತದ ಜತೆಗೆ ಕಲೆ ನಿವಾರಣೆಗೆ ಫಿಲ್ಲರ್ ಇಂಜೆಕ್ಷನ್ ಚಿಕಿತ್ಸೆ ಹೊಸದಾಗಿ ಬಂದಿದೆ. ಇದನ್ನು ಮಾಡಿಸಿಕೊಂಡರೆ ಮುಖ ನಯವಾಗಿ, ಅಂದ ಇಮ್ಮಡಿಯಾಗುತ್ತದೆ. ತ್ವಚೆ ಸದಾ ನಳನಳಿಸುವಂತಿರುತ್ತದೆ, ಆಕರ್ಷಕವಾಗಿ ಎದ್ದುಕಾಣುವ ವ್ಯಕ್ತಿತ್ವ ಪಡೆಯಬಹುದು.

ತ್ವಚೆಯ ಮೇಲಿನ ಸುಕ್ಕು, ಕಣ್ಣ ಸುತ್ತ ಕಪ್ಪು ವೃತ್ತ ಇದ್ದರೆ ಬೇಗನೆ ವಯಸ್ಸಾದವರ ಹಾಗೆ ಕಾಣುವುದು ಸಹಜ. ಇದು ನಮ್ಮನ್ನು ದೈಹಿಕ, ಮಾನಸಿಕವಾಗಿ ಆತಂಕಕ್ಕೀಡು ಮಾಡುತ್ತದೆ. ಹೊಸ ಸೌಂದರ್ಯ ಚಿಕಿತ್ಸೆಯಿಂದ ಆತಂಕ ದೂರವಾಗಿ ಎಲ್ಲರಂತೆ ಸಹಜ ಜೀವನ ನಡೆಸಲು ಸಾಧ್ಯ.

ಕಪ್ಪು ವೃತ್ತ ಉಂಟಾಗಲು ಕಾರಣ ಅನೇಕ. ವಿವಿಧ ರೀತಿಯ ಅಲರ್ಜಿಗಳು, ಜೀವನಶೈಲಿಯ ಕಾಯಿಲೆಗಳು, ನಿದ್ರಾಹೀನತೆ, ಹಸಿವಾಗದೇ ಇರುವುದು, ಮಾನಸಿಕ ಕಾಯಿಲೆಗಳಾದ ಉದ್ವಿಗ್ನತೆ, ಖಿನ್ನತೆ, ಮಾನಸಿಕ ಒತ್ತಡ, ಧೂಮಪಾನ, ಮದ್ಯಪಾನಗಳಿಂದ ಕಣ್ಣ ಸುತ್ತ ಕಪ್ಪುವೃತ್ತ ಉಂಟಾಗುವುದಲ್ಲದೆ ತ್ವಚೆಯಲ್ಲಿ ಕಲೆಗಳು ಎದ್ದು ಕಾಣುತ್ತವೆ. ಆಹಾರದಲ್ಲಿ ಪೌಷ್ಟಿಕಾಂಶದ ಕೊರತೆ, ರಕ್ತಹೀನತೆ, ಕಬ್ಬಿಣದ ಅಂಶದ ಕೊರತೆ ಇದ್ದರೂ ಕಪ್ಪುಕಲೆಗಳು ಮೂಡುವುದು ಸಹಜ. ಇನ್ನು ಕೆಲವರಿಗೆ ಆನುವಂಶಿಕವಾಗಿ ಈ ಸಮಸ್ಯೆ ತಲೆದೋರಬಹುದು. ವಯಸ್ಸು ಆಗುತ್ತಾ ಇದ್ದಂತೆ ಮುಖದ ಮೇಲೆ ಸುಕ್ಕುಗಳು, ಚರ್ಮ ಜೋತು ಬೀಳುವುದು, ಕಪ್ಪು ವೃತ್ತ ಉಂಟಾಗುವ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಇವೆಲ್ಲದರ ಜತೆಗೆ ದೀರ್ಘಕಾಲ ಬಿಸಿಲಿಗೆ ಚರ್ಮವನ್ನು ಒಡ್ಡುವುದು, ಅಧಿಕ ಬೊಜ್ಜು ಇರುವುದರಿಂದಲೂ ವಯಸ್ಸಾದ ಹಾಗೆ ಚರ್ಮ ಜೋತು ಬೀಳಲಾರಂಭಿಸುತ್ತದೆ.

'ದೇಹದ ಒಳಗೆ ಏನೇ ಕಾಯಿಲೆ ಬಂದರೂ ಅದಕ್ಕೆ ಸರಿಯಾದ ಚಿಕಿತ್ಸೆ ನೀಡಿದಾಗ ಕಾಯಿಲೆ ದೂರವಾಗಿ ಕಣ್ಣುಗಳ ಸುತ್ತ ಮೂಡಿದ ಕಪ್ಪು ವೃತ್ತ ಮರೆಯಾಗಬಹುದು. ಆದರೆ ವಯಸ್ಸಾದ ಮೇಲೆ ಬರುವ ಕಪ್ಪುವೃತ್ತ, ಕಲೆಗಳಿಗೆ ಸೂಕ್ತ ಚಿಕಿತ್ಸೆ ಪಡೆದರೆ ಮಾತ್ರ ಈ ಸಮಸ್ಯೆ ಪರಿಹರಿಸಿಕೊಳ್ಳಬಹುದು' ಎನ್ನುತ್ತಾರೆ ಬೆಂಗಳೂರಿನ ಚರ್ಮ ತಜ್ಞ ಹಾಗೂ ಸರ್ಜನ್ ಡಾ.ವೆಂಕಟರಾಮ್.

## ವಿನೂತನ ಚಿಕಿತ್ಸೆ

'ಕಣ್ಣುಗಳ ಸುತ್ತ ಕಪ್ಪು ವೃತ್ತ ಉಂಟಾದಾಗ ಎರಡು ಹೊಸ ಚಿಕಿತ್ಸೆಗಳಿಂದ ನಿವಾರಣೆ ಸಾಧ್ಯ. ಮೊದಲನೆಯದು ಫಿಲ್ಲರ್ ಇಂಜೆಕ್ಷನ್. ಈ ಚಿಕಿತ್ಸೆಯಲ್ಲಿ ಜೋತು ಬಿದ್ದ ಚರ್ಮ ಮೊದಲಿನಂತೆ ಆಗುವುದು, ಸೌಂದರ್ಯ ವೃದ್ಧಿಸುವುದು. ಇದೊಂದು ಆರ್ಟಿಫಿಷಿಯಲ್ ಸಬ್‌ಸ್ಟ್ಯಾನ್ಸ್ ಆಗಿದ್ದು ಒಂದು ಎಂಎಲ್‌ನಷ್ಟನ್ನು ಇಂಜೆಕ್ಷನ್ ಮೂಲಕ ಚರ್ಮಕ್ಕೆ ಸೇರಿಸಿದಾಗ ಚರ್ಮದಲ್ಲಿ ಉಂಟಾಗಿದ್ದ ಹಳ್ಳ ತುಂಬಿ ಮೊದಲಿನ ಹಾಗೆ ಆಗುವುದು. ಈ ಚಿಕಿತ್ಸೆ ವರ್ಷಕ್ಕೊಮ್ಮೆ ಮಾಡಿಸಿಕೊಳ್ಳಬೇಕು. ಇದಕ್ಕೆ ತಗಲುವ ವೆಚ್ಚ ಸುಮಾರು 35 ಸಾವಿರ ರೂಪಾಯಿ' ಎಂದು ವಿವರ ನೀಡುತ್ತಾರೆ ಡಾ. ವೆಂಕಟರಾಮ್.

ಇನ್ನೊಂದು ಅತ್ಯಾಧುನಿಕ ಚಿಕಿತ್ಸೆ 'ನ್ಯಾನೊ ಫ್ಯಾಟ್ ಚಿಕಿತ್ಸೆ ಮತ್ತು ಕೊಬ್ಬಿನ ಕಸಿ (ಫ್ಯಾಟ್ ಟ್ರಾನ್ಸ್‌ಪ್ಲಾಂಟೇಷನ್) ಚಿಕಿತ್ಸೆ. ಕೊಬ್ಬಿನ ಕಸಿ ಚಿಕಿತ್ಸೆಯಲ್ಲಿ ವ್ಯಕ್ತಿಯ ಹೊಟ್ಟೆಯಿಂದ ಸುಮಾರು ಐದು ಎಂಎಲ್‌ನಷ್ಟು ಕೊಬ್ಬು ತೆಗೆದು ಶಸ್ತ್ರಚಿಕಿತ್ಸೆ ಮೂಲಕ ಕಪ್ಪುವೃತ್ತದ ಭಾಗಕ್ಕೆ ಕಸಿ ಮಾಡುತ್ತೇವೆ. ಇದು ಸುಮಾರು ಐದಾರು ವರ್ಷಗಳವರೆಗೆ ಹಾಗೇ ಇರುತ್ತದೆ. ಇದಕ್ಕೆ 35 ಸಾವಿರ ರೂಪಾಯಿ ಖರ್ಚು ಬರುತ್ತದೆ' ಎನ್ನುವ ಇವರು 'ನ್ಯಾನೊ ಫ್ಯಾಟ್ ಚಿಕಿತ್ಸೆಯೂ ಕೂಡ ಕಪ್ಪುಕಲೆ ನಿವಾರಣೆಗೆ ಅತ್ಯಂತ ಸೂಕ್ತ ವಿಧಾನ. ಇಲ್ಲಿ ಕೊಬ್ಬಿನ ಸಣ್ಣ ಸಣ್ಣ ಕಣಗಳನ್ನು ತೆಗೆದು ಕಸಿ ಮಾಡಲಾಗುತ್ತದೆ. ಈ ಸ್ಟೆಮ್‌ಸೆಲ್ಸ್ ವರ್ಗಾವಣೆ ಮಾಡುವುದರಿಂದ ಕಪ್ಪು ವೃತ್ತ ನಿರ್ಮೂಲನೆಯಾಗಿ ತ್ವಚೆಯಲ್ಲಿ ತಾಜಾತನ ಉಂಟಾಗುತ್ತದೆ' ಎಂದು ಹೇಳುತ್ತಾರೆ.

## ಶಸ್ತ್ರಚಿಕಿತ್ಸೆ ಹೇಗೆ?

'ಕೊಬ್ಬಿನ ಕಸಿ ಮಾಡುವಾಗ ಲೈಪೋಸೆಕ್ಷನ್ ಎಂಬ ಸರಳ ಹೀರುವಿಕೆ ವಿಧಾನದಿಂದ ಹೊಟ್ಟೆ ಅಥವಾ ತೊಡೆಯ ಭಾಗದಿಂದ ನಿಮ್ಮದೇ ಕೊಬ್ಬನ್ನು ಕೊಯ್ಲು ಮಾಡಲಾಗುತ್ತದೆ. ಇದನ್ನು ಸಿರಿಂಜ್ ಅಥವಾ ಶಸ್ತ್ರಚಿಕಿತ್ಸಾ ಸಾಧನ ಮೂಲಕ ಸ್ಥಳೀಯ ಅರಿವಳಿಕೆ ನೀಡಿ ಮಾಡಲಾಗುತ್ತದೆ. ಕೇವಲ ಒಂದು ಗಂಟೆಯಲ್ಲಿ ಚಿಕಿತ್ಸೆ ಮುಗಿಯುತ್ತದೆ. ಅದೇ ದಿನ ಮನೆಗೆ ಮರಳಬಹುದು ಹಾಗೂ ದೈನಂದಿನ ಕಾರ್ಯಗಳನ್ನು ನಿರ್ವಹಿಸಬಹುದು' ಎನ್ನುತ್ತಾರೆ ಈ ವೈದ್ಯರು.

ಈ ಚರ್ಮ ಚಿಕಿತ್ಸೆಗಳು ಹಲವಾರು ವರ್ಷಗಳಿಂದ ವಿದೇಶಗಳಲ್ಲಿ ಇದ್ದರೂ ನಮ್ಮಲ್ಲಿ ನ್ಯಾನೊಫ್ಯಾಟ್ ಚಿಕಿತ್ಸೆ ಅತ್ಯಂತ ಹೊಸದು. ಶಸ್ತ್ರಚಿಕಿತ್ಸೆ ಮಾಡುವ ಸೌಲಭ್ಯಗಳಿರುವ ಚರ್ಮ ಚಿಕಿತ್ಸಾಲಯಗಳಲ್ಲಿ ಈ ಚಿಕಿತ್ಸೆ ಲಭ್ಯ. ಬೆಂಗಳೂರಿನಲ್ಲಿ ವಿಜಯನಗರ, ಬನಶಂಕರಿ ಹಾಗೂ ಕನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ವೆಂಕಟ್ ಚರ್ಮಾಲಯದಲ್ಲಿ ಈ ಅತ್ಯಾಧುನಿಕ ಸೌಂದರ್ಯ ಚಿಕಿತ್ಸೆ ಪಡೆಯಬಹುದು. ಈ ಚಿಕಿತ್ಸೆಗೆ ಒಳಗಾಗುವ ಮೊದಲು ಕೆಲವು ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಮಧುಮೇಹ, ರಕ್ತದೊತ್ತಡ ಇರುವವರು ಚಿಕಿತ್ಸೆಗೊಳಗಾಗುವ ಮೊದಲು ಸಂಪೂರ್ಣ ತಪಾಸಣೆ ಮಾಡಿಸಿಕೊಳ್ಳಬೇಕು. ಬಳಿಕ ಪ್ಲಾಸ್ಟಿಕ್ ಸರ್ಜನ್‌ರನ್ನು ಕಂಡು ಸಲಹೆ ಪಡೆಯಬೇಕು.

ಈ ಹಿಂದೆ ಕಣ್ಣ ಸುತ್ತ ಕಪ್ಪುವೃತ್ತಗಳಿಗೆ ಲೇಸರ್ ಚಿಕಿತ್ಸೆ ಬಳಕೆ ಮಾಡಲಾಗುತ್ತಿತ್ತು. ಆದರೆ ಅದರ ಫಲಿತಾಂಶ ಅಷ್ಟೊಂದು ಪರಿಣಾಮಕಾರಿಯಲ್ಲ. ಈಗ ಬಂದಿರುವ ಈ ಎರಡೂ ಚಿಕಿತ್ಸೆಗಳು ಕಣ್ಣಸುತ್ತ ಕಪ್ಪು ವೃತ್ತ ಹಾಗೂ ಕಲೆ ನಿವಾರಣೆಗೆ ಅತ್ಯಂತ ಪ್ರಯೋಜನಕಾರಿ ಚಿಕಿತ್ಸೆ.

**(ಚರ್ಮ ತಜ್ಞ ಹಾಗೂ ಸರ್ಜನ್ ಡಾ.ವೆಂಕಟರಾಮ್**
**ಸಂಪರ್ಕ: 9845363520)**

